**ಪತ್ರಿಕಾ ಪ್ರಕಟಣೆಗಾಗಿ**

# ಕಿರಾಣಗಳು ಮತ್ತು ಸ್ಥಳೀಯ ಎಂಎಸ್ಎಂಇಗಳಿಗೆ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಿಂದ ಡಿಜಿಟಲ್ ಪ್ಲಾಟ್‌ಫಾರ್ಮ್ ಆರಂಭ

- **ಫ್ಯಾಶನ್ ವಿಭಾಗದಿಂದ ಬಿ2ಬಿ ಹೋಲ್‌ಸೇಲ್ ಕ್ಷೇತ್ರಕ್ಕೆ ಪ್ರವೇಶಿಸಿದ ಫ್ಲಿಪ್‌ಕಾರ್ಟ್ ಹೋಲ್‌ಸೇಲ್**
- **ಮೊದಲ ಹಂತದಲ್ಲಿ 50 ಕ್ಕೂ ಹೆಚ್ಚು ಬ್ರ್ಯಾಂಡ್‌ಗಳು ಮತ್ತು 250 ಕ್ಕೂ ಹೆಚ್ಚು ಸ್ಥಳೀಯ ಉತ್ಪಾದಕರು ಈ ಜಾಲಕ್ಕೆ**

ಬೆಂಗಳೂರು, ಸೆಪ್ಟೆಂಬರ್ 2, 2020: ಭಾರತೀಯ ಮೂಲದ ಫ್ಲಿಪ್‌ಕಾರ್ಟ್ ಗ್ರೂಪ್‌ನ ಡಿಜಿಟಲ್ ಬಿ2ಬಿ ಮಾರ್ಕೆಟ್‌ಪ್ಲೇಸ್ ಆಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತಂತ್ರಜ್ಞಾನವನ್ನು ಬಳಸಿಕೊಂಡು ಇಡೀ ಹೋಲ್‌ಸೇಲ್ ಮಾರ್ಕೆಟ್‌ಪ್ಲೇಸ್ ಅನ್ನು ತಮ್ಮ ಬೆರಳತುದಿಯಲ್ಲಿ ತರುವ ಮತ್ತು ಸ್ಥಳೀಯ ಉತ್ಪಾದಕರನ್ನು ರೀಟೇಲರ್‌ಗಳೊಂದಿಗೆ ಸಂಪರ್ಕ ಸಾಧಿಸುವ ಕಾರ್ಯಚಟುವಟಿಕೆಗಳಿಗೆ ಇಂದು ಚಾಲನೆ ನೀಡಿದೆ.

ರೀಟೇಲ್ ಪರಿಸರ ವ್ಯವಸ್ಥೆಗೆ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಒನ್‌ಸ್ಟಾಪ್ ಪರಿಹಾರವಾಗಿದ್ದು, ಈ ಮೂಲಕ ಭಾರತೀಯ ಗಣನೀಯವಾದ ಬೆಲೆಯಲ್ಲಿ ವಿಸ್ತಾರವಾದ ಉತ್ಪನ್ನಗಳ ಆಯ್ಕೆ, ತಂತ್ರಜ್ಞಾನಾಧಾರಿತ ಹಾಗೂ ಅವರ ವ್ಯವಹಾರಗಳನ್ನು ವೃದ್ಧಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡಲಿದೆ. ಈ ಪ್ಲಾಟ್‌ಫಾರ್ಮ್ ಪ್ರಸ್ತುತ ಗುರುಗ್ರಾಮ, ದೆಹಲಿ ಮತ್ತು ಬೆಂಗಳೂರಿನ ಫ್ಯಾಶನ್ ರೀಟೇಲರ್ಸ್ ಅದರಲ್ಲೂ ವಿಶೇಷವಾಗಿ ಪಾದರಕ್ಷೆ ಮತ್ತು ಜವಳಿ ಉತ್ಪನ್ನ ಕ್ಷೇತ್ರಕ್ಕೆ ಲಭ್ಯವಿದೆ. ಈ ವ್ಯವಹಾರವನ್ನು ಮುಂಬೈ ನಗರಕ್ಕೂ ವಿಸ್ತರಣೆ ಮಾಡುವ ಯೋಜನೆಯನ್ನು ಹೊಂದಿದೆ.

ಈ ವರ್ಷಾಂತ್ಯದ ವೇಳೆಗೆ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಇನ್ನೂ 20 ಕ್ಕೂ ಹೆಚ್ಚು ನಗರಗಳಿಗೆ ಈ ಚಟುವಟಿಕೆಯನ್ನು ವಿಸ್ತರಣೆ ಮಾಡಲು ಯೋಜನೆ ರೂಪಿಸಿದ್ದು, ಹೋಂ & ಕಿಚನ್ ಮತ್ತು ದಿನಸಿ ಪದಾರ್ಥಗಳ ವಿಭಾಗಗಳ ಚಟುವಟಿಕೆಯನ್ನು ಆರಂಭಿಸುವ ಉದ್ದೇಶವನ್ನು ಹೊಂದಿದೆ. ಬಿ2ಬಿ ಡಿಜಿಟಲ್ ಪ್ಲಾಟ್‌ಫಾರ್ಮ್ ಗೂಗಲ್ ಪ್ಲೇಸ್ಟೋರ್‌ನ ಮೂಲಕ ರೀಟೇಲರ್‌ಗಳಿಗೆ ಲಭ್ಯವಿದೆ. 300 ಕ್ಕೂ ಹೆಚ್ಚು ರಚನಾತ್ಮಕ ಪಾಲುದಾರರನ್ನು ಹೊಂದುವ ಉದ್ದೇಶ ಹೊಂದಿದ್ದು, ಮುಂದಿನ ಎರಡು ತಿಂಗಳಲ್ಲಿ 2 ಲಕ್ಷಕ್ಕೂ ಅಧಿಕ ಲಿಸ್ಟಿಂಗ್ ಅನ್ನು ಹೊಂದುವ ಗುರಿಯನ್ನು ಹಾಕಿಕೊಂಡಿದೆ. ಇದಲ್ಲದೇ, ಮುಂಬರುವ ದಿನಗಳಲ್ಲಿ 50 ಕ್ಕೂ ಹೆಚ್ಚು ಬ್ರ್ಯಾಂಡ್‌ಗಳು ಮತ್ತು 250 ಕ್ಕೂ ಹೆಚ್ಚು ಸ್ಥಳೀಯ ಉತ್ಪಾದಕರನ್ನು ಪಾಲುದಾರಿಕೆ ಜಾಲದಲ್ಲಿ ತರಲಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಆದರ್ಶ್ ಮೆನನ್ ಅವರು ಮಾತನಾಡಿ, "ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತಂತ್ರಜ್ಞಾನವನ್ನು ಬಳಸಿಕೊಂಡು ತಮ್ಮ ವ್ಯವಹಾರಗಳನ್ನು ಮತ್ತಷ್ಟು ಸುಲಭಗೊಳಿಸುವ ಮೂಲಕ ಭಾರತೀಯ ಕಿರಾಣ ಮತ್ತು ಎಂಎಸ್ಎಂಇಗಳಿಗೆ ಸಮೃದ್ಧಿಯನ್ನು ತರುವ ಪ್ರಮುಖ ಮೌಲ್ಯದ ಪ್ರತಿಪಾದನೆಯನ್ನು ಮಾಡುವ ರೀತಿಯಲ್ಲಿ ರೂಪಿಸಲಾಗಿದೆ. ಬಿ2ಬಿ ಸಮೂಹದೊಳಗೆ ಇರುವ ಬಲವಾದ ಸಾಮರ್ಥ್ಯಗಳೊಂದಿಗೆ ಕಿರಾಣಗಳು ಮತ್ತು ಎಂಎಸ್ಎಂಇಗಳ ಅಗತ್ಯತೆಗಳನ್ನು ಪೂರೈಸುವತ್ತ ಆದ್ಯತೆ ನೀಡುತ್ತೇವೆ. ಅವರಿಗೆ ಗಣನೀಯ ಪ್ರಮಾಣದ ಮೌಲ್ಯ, ತಂತ್ರಜ್ಞಾನ

ಆಧಾರಿತ ಸೇವೆಯನ್ನು ಬಳಸಿಕೊಂಡು ಜೀವನ ಮಟ್ಟವನ್ನು ಸುಲಭವಾಗಿಸಿಕೊಳ್ಳು ವಿಸ್ತಾರವಾದ ಆಯ್ಕೆಗಳನ್ನು ನೀಡುತ್ತಿದ್ದೇವೆ. ದಿನಸಿ ಇರಲಿ, ಜನರಲ್ ಮರ್ಚೆಂಟ್‌ಗಳಿರಲಿ ಅಥವಾ ಫ್ಯಾಶನ್ ಇರಲಿ, ಈ ವ್ಯವಹಾರಗಳು ಒನ್-ಸ್ಟಾಪ್ ಲಭ್ಯತೆಯೊಂದಿಗೆ ವಿಸ್ತಾರವಾದ ಉತ್ಪನ್ನಗಳ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಇದರೊಂದಿಗೆ ಅವರು ಆಕರ್ಷಕವಾದ ಯೋಜನೆಗಳು ಮತ್ತು ಪ್ರೋತ್ಸಾಹಗಳನ್ನು ಪಡೆಯಲಿದ್ದಾರೆ. ಇದೇ ವೇಳೆ, ವ್ಯಾಪಾರಿಗಳು ದಾಸ್ತಾನು ಆಯ್ಕೆ ಡೇಟಾ ಶಿಫಾರಸುಗಳನ್ನು ಹೊಂದುವುದರೊಂದಿಗೆ ತ್ವರಿತವಾದ ವಿಶ್ವಾಸಾರ್ಹವಾದ ಜಾಲದ ಮೂಲಕ ಉತ್ಪನ್ನಗಳನ್ನು ತಲುಪಿಸಲಾಗುತ್ತದೆ" ಎಂದು ತಿಳಿಸಿದರು.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಗ್ರಾಹಕರು ಹಣದ ಹರಿವನ್ನು ನಿರ್ವಹಿಸಲು ಸಹಕಾರಿಯಾಗಲು ಸುಲಭವಾದ ರೀತಿಯಲ್ಲಿ ಸಾಲ ಸೌಲಭ್ಯವನ್ನು ಪಡೆಯಲಿದ್ದಾರೆ ಮತ್ತು ವ್ಯಾಪಕ ಶ್ರೇಣಿಯ ಫ್ಲಿಪ್‌ಕಾರ್ಟ್ ಗುಣಮಟ್ಟದ ಉತ್ಪನ್ನಗಳನ್ನು ಹೊಂದಲಿದ್ದಾರೆ. ಇವುಗಳನ್ನು ಅತ್ಯಂತ ಸುಲಭವಾಗಿ ಮತ್ತು ಅನುಕೂಲಕರವಾದ ರೀತಿಯಲ್ಲಿ ಆರ್ಡರ್ ರಿಟರ್ನ್ಸ್ ವ್ಯವಸ್ಥೆ ಇರಲಿದೆ. ಅಲ್ಲದೇ, ಆರ್ಡರ್ ಟ್ರ್ಯಾಕಿಂಗ್ ಸೌಲಭ್ಯದೊಂದಿಗೆ ಉತ್ಪನ್ನಗಳನ್ನು ನೇರವಾಗಿ ಮತ್ತು ವೇಗವಾಗಿ ತಮ್ಮ ಶಾಪ್‌ಗಳಿಗೆ ರವಾನೆ ಮಾಡಲಾಗುತ್ತದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಗ್ರಾಹಕರು ಮೈಕ್ರೋಮಾರ್ಕೆಟ್ ಮಟ್ಟಗಳಾದ ಬಿ2ಬಿ ಮತ್ತು ಬಿ2ಸಿಗಳಲ್ಲಿನ ಗ್ರಾಹಕರ ಬೇಡಿಕೆಗಳ ಪರಿಸ್ಥಿತಿಯನ್ನು ಫ್ಲಿಪ್‌ಕಾರ್ಟ್ ಪರಿಸರ ವ್ಯವಸ್ಥೆ ಮೂಲಕ ತಿಳಿದುಕೊಂಡು ಮಾರುಕಟ್ಟೆ ಅಥವಾ ಬೇಡಿಕೆಗೆ ಅನುಗುಣವಾಗಿ ಸೂಕ್ತ ಉತ್ಪನ್ನಗಳನ್ನು ಖರೀದಿಸಬಹುದು ಮತ್ತು ಮಾರಾಟ ಮಾಡಬಹುದಾಗಿದೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತನ್ನ ಬೆಸ್ ಪ್ರೈಸ್ ತಂಡ, ಬ್ರ್ಯಾಂಡ್‌ಗಳೊಂದಿಗಿನ ಸೌಹಾರ್ದಯುತ ಮತ್ತು ಶಕ್ತಿಶಾಲಿಯಾದ ಸಂಬಂಧ, ಕಿರಾಣಗಳ ಆಳವಾದ ಡಿಎನ್‌ಎ ಮತ್ತು 12 ವರ್ಷಗಳಿಗೂ ಅಧಿಕ ಸಮಯದಿಂದ ಬೆಸ್ಟ್ ಪ್ರೈಸ್ ಸ್ಟೋರ್‌ಗಳನ್ನು ಮುನ್ನಡೆಸಿಕೊಂಡು ಬಂದಿರುವ ಅನುಭವವನ್ನು ಹೊಂದಿದೆ. ಈ ಎಲ್ಲಾ ಅನುಭವಗಳು ಕಿರಾಣಗಳು ಮತ್ತು ಎಂಎಸ್‌ಎಂಇಗಳು ತಮ್ಮ ವ್ಯವಹಾರಗಳನ್ನು ವೃದ್ಧಿಸಿಕೊಳ್ಳಲು ನೆರವಾಗುತ್ತವೆ.

ಭಾರತ ಒಂದು ಬೆಳೆಯುತ್ತಿರುವ ಮಾರುಕಟ್ಟೆಯಾಗಿದೆ ಮತ್ತು ಈ ದಿಸೆಯಲ್ಲಿ ಭಾರತದ ರೀಟೇಲ್ ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಕಿರಾಣಗಳು ಮತ್ತು ಎಂಎಸ್‌ಎಂಇಗಳ ಬೆಳವಣಿಗೆಗೆ ಫ್ಲಿಪ್‌ಕಾರ್ಟ್ ನೆರವಾಗುತ್ತಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ದಯಮಾಡಿ https://flipkartwholesale.com/ ಗೆ ಭೇಟಿ ನೀಡಿ.
ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 250 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions

of Indians. Together with Myntra, which holds a prominent position in the online fashion market, PhonePe, India's fastest growing digital payments platform, and now Flipkart Wholesale, the Flipkart Group will continue to steer the transformation of commerce in India through technology.

**For more information, please write to media@flipkart.com.**